ಭರಮ ಪೇಟೆ ಕಡೆಗೆ ಹೋಗುವ ಬಸ್ಸಿನಲ್ಲಿ ಕೂತ ಸಮಯಕ್ಕೆ ಸಾಕಮ್ಮ ಆಟೊದಲ್ಲಿ ಕುಳಿತು ಕಡೂರಿನ ಹಾದಿ ಹಿಡಿದಿದ್ದಳು. ಕಡೂರಿನ ಗಣೇಶನ ದೇವಸ್ಥಾನದಲ್ಲಿ ಸರಳ ವಿವಾಹದ ಎಲ್ಲ ತಯಾರಿಗಳನ್ನು ನಂದೀಶ ಮಾಡಿಕೊಂಡಿದ್ದ. ಆರೇಳು ಜನ ಸ್ನೇಹಿತರ ಜೊತೆಗೆ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಂಡು ಸಾಕಮ್ಮಳಿಗಾಗಿ ಕಾಯುತ್ತಿದ್ದ. ಸಾಕಮ್ಮಳಿಗೆ ಎದೆಯಲ್ಲಿ ದಿಗಿಲಿತ್ತು. ಪ್ರಾರ್ಥನೆ ಇತ್ತು. ತಾಂಡಾದಲ್ಲಿ ಕಳೆದು ಹೋದ ಎಷ್ಟೋ ಹುಡುಗಿಯರಂತೆ ಬದುಕಿನಲ್ಲಿ ತಾನು ಕಳೆದು ಹೋಗಿಲ್ಲವೆಂದು, ಇದೊಂದು ಬಿಡುಗಡೆ ಎಂದು ಮನಸು ಹೇಳುತ್ತಿದ್ದರೂ, ಅಪ್ಪಯ್ಯ ಯಾವಾಗಾದರೂ ಬಂದು ಕೂದಲು ಹಿಡಿದು ಎಳೆದುಕೊಂಡು ಹೋಗಲೂಬಹುದೆಂದು ಅದನ್ನು ದಿಟ್ಟವಾಗಿ ಎದುರಿಸಬೇಕೆಂದು ಅಂದುಕೊಳ್ಳುತ್ತಿದ್ದಳು. ಸಾಧು ಸ್ವಭಾವದ ನಂದೀಶ ಅಪ್ಪನ ಜೊತೆ ಕಿತ್ತಾಡುವ ಕಲ್ಪನೆ ಅವಳಿಗೆ ಮಾಡಿಕೊಳ್ಳಲು ಸಾಧ್ಯವೇ ಆಗಲಿಲ್ಲ.

ಬಸ್ಸಿಳಿದ ಭರಮ ತಾಲೂಕು ಆಫೀಸಿನ ಕಡೆಗೆ ತಿರುಗಿದರೆ ರಾಜೀ ಕಾಲೇಜಿನ ಕಡೆಗೆ ತಿರುಗಿದಳು. ಅಪ್ಪನ ನಡಿಗೆಯಲ್ಲಿ ಎಂದೂ ಇಲ್ಲದ ಬಿರುಸೊಂದು ಕಂಡು ಅವಳ ಮನದಲ್ಲಿ ಗಾಬರಿಯ ಅಲೆಯೊಂದು ಎದ್ದಿತು. ಭರಮ ತಾಲೂಕು ಆಫೀಸು ಪಕ್ಕದ ರಿಜಿಸ್ಟರ್ ಮ್ಯಾರೇಜ್ ಆಫೀಸಿಗೆ ಬಂದ. ಅಲ್ಲಿ ನಾಲ್ಕೈದು ಜೋಡಿಗಳು ನಿಂತಿದ್ದವು. ಭರಮ ಎರಡು ಮೂರು ಸಲ ಅಲ್ಲಿಯೇ ಅಡ್ಡಾಡುತ್ತ ಸಾಕಮ್ಮಳಾಗಲಿ ಅವಳ ಗೆಳತಿಯರಾಗಲಿ ಇರಬಹುದೆಂದು ಹುಡುಕಾಡಿದ, ಅಂತಹ ಯಾವ ಸೂಚನೆ ಸಿಗದೇ, ಅಲ್ಲಿಯೇ ದೂರದಲ್ಲಿ ಕೂತು ಬೀಡಿ ಎಳೆದ.

ಭರಮ ಬೀಡಿ ಸೇದಿ ಸೇದಿ ಬಿಸಾಡುವ ಹೊತ್ತಿಗೆ ಕಡೂರಿನ ಗಣೇಶನ ದೇವಸ್ಥಾನದಲ್ಲಿ ಯಾವ ವಿಘ್ನವಿಲ್ಲದೆ ಸಾಕಮ್ಮ ನಂದೀಶನ ಸರಳ ವಿವಾಹ ನಡೆದುಹೋಗಿತ್ತು. ಹಾರ ಬದಲಿಸಿಕೊಳ್ಳುವವರೆಗೂ ಗಟ್ಟಿಯಾಗಿದ್ದ ಸಾಕಮ್ಮ ತಾನು ನಂದೀಶನ ಹೆಂಡತಿಯಾದೆ, ಇನ್ನೂ ತಾಂಡಾದ ಬಂಧ ಮುಗಿಯಿತು ಎಂದು ಖುಷಿಯಾದರೂ, ಅಪ್ಪಯ್ಯನ ಅವ್ವನ ರಾಜೀಯ ಮುಖ ನೆನಪಾಗಿ, ನಾಳೆ ಮದುವೆ ವಿಷಯ ಹರಡಿ ಅವರಿಗಾಗಬಹುದಾದ ಅವಮಾನ, ಬಹಿಷ್ಕಾರ, ದಂಡ ಎಲ್ಲವೂ ನೆನಪಾಗಿ ಗಾಬರಿಗೊಂಡಳು. ನಂದೀಶ ಅವಳ ಗಾಬರಿ ಹೊತ್ತ ಮುಖ ಕಂಡು 'ಏನೂ ಆಗೋಲ್ಲ...' ಎಂದು ಕೈ ಅದುಮಿದ. ಅಲ್ಲಿಂದ ನಗುತ್ತಲೇ ಕಾರಿನಲ್ಲಿ ಬೀರೂರಿನ ಬಾಡಿಗೆ ಮನೆ ಕಡೆ ಹೊರಟರು.

ಸಂಜೆಮಟ ಸಾಕಮ್ಮ ಅಲ್ಲಿ ಸುಳಿಯದೆ ಸ್ವಲ್ಪ ನೆಮ್ಮದಿಯಿಂದಲೇ ಭರಮ ತಾಂಡಾದ ಕಡೆಗೆ ಹೊರಟ. ಊರಿಗೆ ಬರುವ ಕಡೆಯ ಬಸ್ ಹೋದ ಮೇಲೆ ಸಾಕಮ್ಮ ಬಾರದೇ ಇದ್ದಾಗ ಸಾಕಮ್ಮ ಮನೆ ಬಿಟ್ಟು ಹೋಗಿರುವುದು ಒಮ್ಮೆಲೇ ಮನೆಯಲ್ಲಿದ್ದ ಮೂರು ಜನರಿಗೂ ಗೊತ್ತಾಯಿತು. ಬಸ್ ಸ್ಟಾಪಿಗೂ ಮನೆಗೂ ಅಡ್ಡಾಡುತ್ತಿದ್ದ ಭರಮ ಕೊನೆಯ ಬಸ್‌ನಲ್ಲಿ ಸಾಕಮ್ಮ ಬಾರದೇ ಇದ್ದಾಗ



ದಾಹದ ನೆಲಕ್ಕೆ
ಮಳೆಯ ಹನಿಯುವಿಕೆ
ಧಗೆಯ ಎದೆಗೆ
ಕಣ್ಣೀರ ಕನಿಯುವಿಕೆ
ಕನಿಷ್ಠ ಸಮಾಧಾನ!

—ಅವಿಜ್ಞಾನಿ, ಮಂಗಳೂರು

ಸಿಟ್ಟಿನಲ್ಲಿ ಕುದಿಯುತ್ತಿದ್ದ. ಪೇಟೆಗೆ ಹೊರಟು ಅವಳನ್ನು ಹುಡುಕಿ ಎಳೆದುಕೊಂಡು ಬರಬೇಕು ಅನಿಸುತ್ತಿತ್ತು. ಲಕ್ಕವ್ವ ಅಳುತ್ತಿದ್ದಳು. ರಾಜೀ ನಾಲ್ಕೈದು ಸಲ ಸಾಕಮ್ಮಳಿಗೆ ಕಾಲ್ ಮಾಡಿ ಸ್ವಿಚ್ ಆಫ್ ಇದ್ದ ಕಾರಣ ಮನೆಯ ಸ್ಥಿತಿಯನ್ನ ಉದ್ದಕ್ಕೆ ಮೆಸೇಜು ಮಾಡಿ ಗಳಿಗೆಗೊಂದು ಸಲ ಮೊಬೈಲ್ ನೋಡುತ್ತಿದ್ದಳು.

ಭರಮನಿಗೆ 'ಗಂಡು ಮಗುವಾದರೂ ಹುಟ್ಟಬೇಕಿತ್ತು' ಅನಿಸಲು ಶುರುವಾಯ್ತು. ತಾಂಡಾದ ಎದುರು ತಲೆ ತಗ್ಗಿಸುವ ಕೆಲಸ ಮಾಡಿಬಿಟ್ಟಳಲ್ಲ ಎಂದು ಬೈದುಕೊಂಡ. ನಾಳೆ ವಿಷಯ ಗೊತ್ತಾಗಿ ಹಾಕಬಹುದಾದ ದಂಡ ಬಹಿಷ್ಕಾರದ ನೆನಪಾಗಿ ಸಣ್ಣಗೆ ನಡುಗತೊಡಗಿದ. ಗುಡ್ಡದ ಮೇಲೆ ಶರೀಫಜ್ಜ ಹಾಡತೊಡಗಿದ.

***

ಮದುವೆಯಾದ ಮೂರನೇ ದಿನಕ್ಕೆ ನಂದೀಶನನ್ನ ಕೆಲಸಕ್ಕೆ ಕಳಿಸಿ ಸಾಕಮ್ಮ ಮನೆಯ ಒಳಕ್ಕೆ ಹೋಗುವ ಸಮಯಕ್ಕೆ ಭರಮ ಅವಳ ಮನೆಯ ಮುಂದೆ ನಿಂತಿದ್ದ, ಬಾಗಿಲು ಮುಚ್ಚಲು ಹೋದ ಸಾಕಮ್ಮ ಅಪ್ಪಯ್ಯನ ಕಂಡು ಬೆಚ್ಚಿಬಿದ್ದಳು. ಭರಮ ರಸ್ತೆಯನ್ನು ದಾಟಿ ಬಾಗಿಲ ಮುಂದೆ ನಿಂತ, ಅವನ ಕೈಯಲ್ಲಿ ಕುಡುಗೋಲಿತ್ತು. ಸಾಕಮ್ಮ ನಡುಗುತ್ತಲೇ 'ಬಾಪ್ಪಯ್ಯ ಒಳಕ್ಕ' ಎಂದು ಕರೆದಳು.

ಭರಮ ಮಾತಾಡದೆ ಹೊಸ್ತಿಲಿಗೆ ಕಾಲಿಟ್ಟ. ಸಾಕಮ್ಮ ಸೀದಾ ಅಡುಗೆ ಮನೆಗೆ ಹೋದಳು, ಆಗಲೇ ಅವಳ ಮುಖ ಬೆವೆತುಹೋಗಿತ್ತು. ಭರಮನ ಕೈಯಲ್ಲಿ ಮಸೆದ ಕುಡುಗೋಲು ಕಂಡಿದ್ದು ಎಲ್ಲವೂ ನೋಡಿ ಸಾಕಮ್ಮನ ಕಾಲುಗಳು ತಣ್ಣಗಾದವು. ಇಡೀ ದೇಹ ಸಣ್ಣಗೆ ಕಂಪಿಸತೊಡಗಿತು. ಈ ಕ್ಷಣ ಧೈರ್ಯ ತಂದುಕೊಳ್ಳದಿದ್ದರೆ ತನ್ನ ಜೀವನವೆಲ್ಲ ತಾಂಡಾದಲ್ಲೇ ಕಳೆಯಬೇಕು ಎಂದು ನೆನಪಾಗಿ ಧೈರ್ಯ ತಂದುಕೊಂಡಳು. ನಂದೀಶನಿಗೆ ಕಾಲ್ ಮಾಡೋಣ ಎಂದುಕೊಂಡವಳು ಅಪ್ಪನ ಕುಡುಗೋಲು ಎಲ್ಲಿ ನಂದೀಶನ ರಕ್ತದ ರುಚಿ ನೋಡುತ್ತದೋ ಎಂದು ನೆನಪಾಗಿ ತಾನೇ ಎದುರಿಸೋಣ ಎಂದು ಕೈಯಲ್ಲಿ ಲೋಟ ಹಿಡಿದು ಅಪ್ಪಯ್ಯನ ಮಾತಾಡಿಸಲು ನಡುಮನೆಗೆ ಬಂದಳು.

ಭರಮ ಕೈಯಲ್ಲಿದ್ದ ಕುಡುಗೋಲು ಚೇರು ಮೇಲೆ ಇತ್ತು. ಇನ್ನೊಂದು ಚೇರು ಮೇಲೆ ಕುಳಿತಿದ್ದ. ಸಾಕಮ್ಮಳಿಗಾಗಿ ಮೂರು ದಿನ ಕಡೂರು ಚಿಕ್ಕಮಗಳೂರು ಸಖರಾಯಪಟ್ಟಣ ಕಡೆ ಹುಚ್ಚನಂತೆ ಅಲೆದಾಡಿದ್ದ. ಸಾಕಮ್ಮ ಓಡಿಹೋದ ವಿಷಯ ತಾಂಡಾದ ಒಂದೆರಡು ಮನೆಗಳನ್ನು ತಲುಪಿತ್ತು. ಸಾಕಮ್ಮ ಕೆಲಸ ಮಾಡುತ್ತಿದ್ದ ಟೈಲರಿಂಗ್ ಶಾಪಿನಲ್ಲಿದ್ದ ಹುಡುಗಿ ಸಾಕಮ್ಮ ಬಾರದ ದಿನವೇ ವಿಷಯವನ್ನು ಡಂಗೂರ ಸಾರಿಸಿದ್ದಳು. ಅದು ಕಿವಿಯಿಂದ ಕಿವಿಗೆ ಬಾಯಿಂದ ಬಾಯಿಗೆ ಹರಡಿ ತಾಂಡಾದ ನಿಂಗಣ್ಣನ ಕಿವಿಗೆ ಸೇರಿದಾಗ ಮಧ್ಯರಾತ್ರಿಯಾಗಿತ್ತು.

ಮರುದಿನ ಸಾಕಮ್ಮ ಓಡಿಹೋದ ವಿಷ್ಯ ತಾಂಡಾದ ಹೆಂಗಸರಿಗೆ ಗೊತ್ತಾಗಿ ಒಂದಿಬ್ಬರು ಲಕ್ಕವ್ವನನ್ನ ಸುಳ್ಳೇ ಸಮಾಧಾನ ಮಾಡಲು ಬಂದಿದ್ದರು. ಗಂಡಸರು ಭರಮನಿಗೆ ಸಿಟ್ಟು ಕೋಪ ಬರುವ ಎಲ್ಲ ಮಾತುಗಳನ್ನು ಆಡುತ್ತ ಊರು ವಿಧಿಸುವ ದಂಡದ ಬಗ್ಗೆ ಸೂಚನೆ ಕೊಟ್ಟು ಬೆದರಿಕೆಯನ್ನು ಕೊಟ್ಟು ಹೋಗಿದ್ದರು. ಎರಡು ದಿನ ಭರಮ ಎಲ್ಲ ಕಡೆ ಸಾಕಮ್ಮನನ್ನು ಹುಡುಕತೊಡಗಿದ. ನಂದೀಶನ ಮನೆಗೂ ಹೋಗಿ ಅವರಿಂದ ಮರ್ಯಾದೆ ತೆಗೆಸಿಕೊಂಡು ಮತ್ತಷ್ಟು ಕ್ರೋಧಗೊಂಡು ಪೇಟೆ ಬಸ್‌ಸ್ಟ್ಯಾಂಡಿನಲ್ಲೇ ಮಲಗಿ ಮನೆಗೂ ಹೋಗದೆ ಎರಡು ದಿನ ಹುಡುಕಿ ಮೂರನೇ ದಿನ ಬೀರೂರಿನ ಹೊಸ ಟೌನ್‌ಶಿಪ್ಪಿನಲ್ಲಿ ಸಾಕಮ್ಮಳ ಮನೆ ಹುಡುಕುವುದರಲ್ಲಿ ಸಫಲನಾಗಿದ್ದ. ಅವಳನ್ನು ನೋಡಿದ ಕೂಡಲೇ ಅವಳ ಕೂದಲು ಎಳೆದು ದರದರ ಎಳೆದುಕೊಂಡು ತಾಂಡಾದ ಮನೆ ಹೊಸ್ತಿಲಿಗೆ ಬಿಸಾಡಬೇಕೆಂದು ಅನಿಸಿತ್ತು. ಪೇಟೆ, ಪೇಟೆಯ ಜನರು ಇದೆಲ್ಲದರ ಮಧ್ಯೆ ತಾನು ಆತುರಗೆಡಬಾರದೆಂದು ಮನವೊಲಿಸಿ ಕರೆದುಕೊಂಡು ಬೇಕೆಂದು ಒಳಗೆ ಬಂದಿದ್ದ.

ಸಾಕಮ್ಮ ಕೊಟ್ಟ ನೀರು ಗಟಟನೆ ಕುಡಿದು–

'ನಡೀ ಮನೆಕ್ಕ... ನಿಮ್ ಅವ್ವ ನೀರು ಊಟ ಬಿಟ್ಟು ಅಳಾಕತ್ತಿದ್ದಾಳೆ ಹುಟ್ಟಿಸಿದೋರ ಹೊಟ್ಟೆ ಉರಿಸಿ ಏನ್ ಸಿಗ್ತದ ನಿಂಕಾ...' ಎಂದು ಎದ್ದ.

'ನಾ ಬರೊಲ್ಲೆ, ನನಗೂ ತಾಂಡಕ್ಕೂ ಇನ್ನೂ ನಂಟಿಲ್ಲ...'

'ಅವ್ವ ಸತ್ರು ಪರವಾಗಿಲ್ಲ ನಿಂಗೆ ಈ ಜನಿವಾರದ ಮನೆಯಾಳಂದೇ ಬೇಕೇನೂ? ನಮ್ ಹೊಟ್ಟೆ ಯಾಕೆ ಉರಿಸಕ್ ಹತ್ತಿಯ...?'

'ನನಗೆ ಆ ಬದುಕು ಸಾಕಾಗೈತಿ ಅಪ್ಪಯ್ಯ, ಸುಮ್ನ ಹೊರುಡ್ರಿ...'

'ನಿಂಗೆ ಮಂಕುಬೂದಿ ಎರಚಿ ಕಟ್ಕೊಂಡನಲ್ಲ ಅವನ ಕರೀಲೆ... ಅವನ ತಲೆ ತೆಗದು ನಿನ್ ಎಳ್ಕೊಂಡ್ ಹೋಗ್ತೀನಿ' ಎಂದು ಹಲ್ಲು ಕಡಿದ.

'ನೀ ಏನಾರ ಮಾಡ್ಕ ಅಪ್ಪಯ್ಯ..., ನನಗಾ ಸಾಕಾಗೈತಿ... ನಾನು ದೇವೀರಿ ತರ ನಿನ್ ಜೊತೆ ತಾಂಡಾಗೆ ಬಂದು ಅಲ್ಲಿ ಕೂತು ಕೊಳೀಬೇಕೆನೂ?'

ಭರಮನಿಗೆ ಅವಳ ಮಾತು ಕೇಳಿ ಮತ್ತಷ್ಟು